O.S .No. 407/2012
PW-1

ದಿನಾಂಕ: 05-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು 1 ನೇ ಪ್ರತಿವಾದಿ ಪರ ಶ್ರೀ ಎಂ.ಬಿ.ಸಿ ವಕೀಲರಿಂದಃ**

ತರಿಕಲ್ ಗ್ರಾಮದ ವೆಂಕಟಸುಬ್ಬಯ್ಯ ರವರ ಮಗ ಕೆ.ವಿ ಶೇಷಾದ್ರಿ ಎಂದರೆ ನಾನೇ. ದಾವೆಯನ್ನು ದಾವಾ ಆಸ್ತಿಯ ಸಂಬಂಧ ಹೂಡಿರುತ್ತೀರಾ ಎಂದರೆ ಸರಿ. ದಾವೆ ಹೂಡುವ ಕಾಲಕ್ಕೆ ದಾವಾ ಆಸ್ತಿಯಲ್ಲಿ ನಿವೇ ಸ್ವಾಧೀನ ಇದ್ದೀರಿ ಎಂದು ದಾವೆ ಹೂಡಿರುತ್ತೀರಾ ಎಂದರೆ ಸರಿ. ನಿಮಗೆ ಮಲ್ಲೇಕೊಪ್ಪಲು ಗ್ರಾಮದ ಸುರೇಂದ್ರ ರವರ ಹೆಂಡತಿ ಸುಶೀಲ ರವರು ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎಂದು ಹೇಳುತ್ತಾರೆ.

ನೀವು ನಿಮ್ಮ ಹೆಂಡತಿ ಸುನಿತ ರವರು ದಾವಾ ಆಸ್ತಿಯನ್ನು ದಿಃ30.03.2021 ರಂದು ಸುಶೀಲ ಕೋಂ ಸುರೇಂದ್ರ ರವರಿಗೆ ಶುದ್ಧ ಕ್ರಯಕ್ಕೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಶುದ್ಧ ಕ್ರಯಕ್ಕೆ ಕೊಟ್ಟಿಲ್ಲ, ಹಣ ಪಡೆದು ಭೋಗ್ಯಕ್ಕೆ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಸಾಕ್ಷಿಗೆ ದಿಃ30.03.2021 ರ ಕ್ರಯ ಪತ್ರವನ್ನು ತುೋರಿಸಿ, ಓದಿ ಹೇಳಿದ್ದು, ಅದಕ್ಕೆ ಸಾಕ್ಷಿ ನಾನು ಶುದ್ಧ ಕ್ರಯಕ್ಕೆ ಕೊಟ್ಟಿಲ್ಲ, ಏನೋ ಮೋಸ ಆಗಿದೆ ಎಂದು ಹೇಳುತ್ತಾರೆ. ಸಾಕ್ಷಿಗೆ ದಿಃ30.03.2021 ರ ಕ್ರಯ ಪತ್ರವನ್ನು ತೋರಿಸಿದ್ದು, ಅದರಲ್ಲಿರುವ ಭಾವಚಿತ್ರವನ್ನು ತೋರಿಸಿದ್ದು, ಸದರಿ ಭಾವಚಿತ್ರದಲ್ಲಿ ತನ್ನನ್ನು ಹಾಗೂ ತನ್ನ ಹೆಂಡತಿಯನ್ನು ಹಾಗೂ ಹಸ್ತಾಕ್ಷರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ದಿಃ30.03.2021 ರ ಕ್ರಯ ಪತ್ರವನ್ನು **ನಿಡಿ-6** ಎಂದು, ಭಾವಚಿತ್ರಗಳನ್ನು **ನಿಡಿ-6(ಎ) ಮತ್ತು (ಬಿ)** ಎಂದು, ಹಸ್ತಾಕ್ಷರಗಳನ್ನು **ನಿಡಿ-6(ಸಿ) ಮತ್ತು (ಡಿ)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಿ, ಸದರಿ ಭಾವಚಿತ್ರ ಹಾಗೂ ಹಸ್ತಾಕ್ಷರ ಸುಶೀಲ ಕೋಂ ಸುರೇಂದ್ರ ರವರದ್ದು ಎಂದರೆ ಸಾಕ್ಷಿ ಹೌದು ಎಂದು ಒಪ್ಪಿದ ಮೇರೆಗೆ ಸದರಿ ಭಾವಚಿತ್ರವನ್ನು **ನಿಡಿ-6(ಇ) ಮತ್ತು (ಎಫ್)** ಎಂದು ಗುರುತಿಸಲಾಯಿತು.

ನಿಡಿ-6 ರಲ್ಲಿ ಬಾಜುದಾರರು 24 ಗುಂಟೆ ಒತ್ತುವರಿ ಮಾಡಿರುತ್ತಾರೆಂದು ಬರೆಸಿರುತ್ತೀರಾ ಎಂದರೆ ಸಾಕ್ಷಿ ನಾನು ಕ್ರಯ ಪತ್ರ ಮಾಡಿಲ್ಲ, ಭೋಗ್ಯ ಪತ್ರ ಮಾಡಿದ್ದೇನೆ

ಎಂದು ಹೇಳುತ್ತಾರೆ.  ನಿಡಿ-6 ರಲ್ಲಿ ಸ್ವಾಧೀನದ ಬಗ್ಗೆ ನಮೂದಿಸಿದ್ದೀರಾ ಎಂದರೆ ಸಾಕ್ಷಿ ಸ್ವಾಧೀನದ ಬಗ್ಗೆ ಬರೆದಿಲ್ಲ, ಹಣ ಪಡೆದ ಬಗ್ಗೆ ಬರೆದಿದ್ದೇನೆ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ದಾಖಲೆಗಳಿಗೆ ಸಹಿ ಮಾಡಬೇಕಾದರೆ ಅದನ್ನು ಓದಿ ಸಹಿ ಮಾಡುವ ಅಭ್ಯಾಸ ಇದೆಯೋ ಅಥವಾ ಹಾಗೆ ಸಹಿ ಮಾಡುತ್ತಿರೋ ಎಂದರೆ ಸಾಕ್ಷಿ ವಯಸ್ಸಾಗುತ್ತಾ, ದೃಷ್ಟಿ ಕುಂದಿದ್ದು, ಸಣ್ಣ ಅಕ್ಷರಗಳು ಕಾಣುವುದಿಲ್ಲ, ಹಾಗೆಯೇ ಮಾಡಬೇಕಾಗುತ್ತದೆ ಎಂದು ಹೇಳುತ್ತಾರೆ.  ನಿಮಗೆ ಸುಳ್ಳು ಪತ್ರಗಳಿಗೆ ಸಹಿ ಹಾಕುವ ಅಭ್ಯಾಸ ಇದೆಯೇ ಎಂದರೆ ಸಾಕ್ಷಿ ಸುಳ್ಳು ಪತ್ರಕ್ಕೆ ಏಕೆ ಸಹಿ ಮಾಡಲೀ, ನಾನು ಭೋಗ್ಯ ಪತ್ರಕ್ಕೆ ಮಾಡಿದ್ದೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಮೇಲೆ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿ ಕ್ರಯ ಮಾಡಿಲ್ಲ, ಭೋಗ್ಯ ಮಾಡಿರುವುದರಿಂದ ಹಕ್ಕು ಇದೆ ಎಂದು ಹೇಳುತ್ತಾರೆ.

ದಾವಾ ಆಸ್ತಿ ಸುಶೀಲ ರವರ ಸ್ವಾಧೀನದಲ್ಲಿದ್ದು, ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಹಣ ವಾಪಸ್ಸು ಕೊಡುವವರೆಗೂ ಸ್ವಾಧೀನ ಅವರೇ ಇರುವುದಾಗಿ ಇದ್ದಾರೆ ಎಂದು ಹೇಳುತ್ತಾರೆ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.